**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಕ್ರಿ.ಮಿಸ್ ನಂಬರ್  1324/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಸುಮಿತ್ರ ಸಿ.ಎಂ.** | ಪಿ.ಡಬ್ಲ್ಯೂ - 1 |
| ತಂದೆಯ/ಗಂಡನ ಹೆಸರು | | ಸುರೇಶ | |
| ವಯಸ್ಸು | | 35 ವರ್ಷ | |
| ಕೆಲಸ | | ಗೃಹಿಣಿ | ಸಾ ಪ್ರ ಬೋ |
| ವಾಸ | | ಚಿಕ್ಕಕವಲಂದೆ ಗ್ರಾಮ | ದಿಃ 18.03.2023 |

**ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ**

ಎದುರುದಾರ ನನ್ನ ಗಂಡ. ನನ್ನ ಮತ್ತು ಎದುರುದಾರನ ವಿವಾಹವು ದಿನಾಂಕ 18.05.2003 ರಂದು ದೇವನೂರು ಗ್ರಾಮದ ಗುರುಮಲ್ಲೇಶ್ವರ ಕಲ್ಯಾಣ ಮಂಟಪದಲ್ಲಿ ಜರುಗಿರುತ್ತದೆ. ಮದುವೆ ಕಾಲಕ್ಕೆ ಎದರುದಾರನಿಗೆ ನನ್ನ ತಂದೆ 15 ಗ್ರಾಂ ಚಿನ್ನದ ಸರ , 6 ಗ್ರಾವಂ ಚಿನ್ನದ ಉಂಗುರ ಮತ್ತು ವರೋಪಚಾರವನ್ನು ನೀಡಿ ಮದುವೆ ಮಾಡಿಕೊಟ್ಟಿದ್ದರು. ಮದುವೆಯಾದ ನಂತರ ನಾನು ಎದುರುದಾರನ ಮನೆಯಲ್ಲಿ 3-4 ವರ್ಷಗಳ ಕಾಲ ಅನ್ಯೋನ್ಯವಾಗಿ ಜೀವನ ನಡೆಸಿರುತ್ತೇವೆ. ನನಗೆ ಮತ್ತು ಎದುರುದಾರನಿಗೆ 2 ಮತ್ತು 3 ನೇ ಅರ್ಜಿದಾರರು ಮಕ್ಕಳಿರುತ್ತಾರೆ. ಎದುರುದಾರನು ಯಾವಾಗಲೂ ಮದ್ಯಪಾನ ಮಾಡಿಕೊಂಡು ಬಂದು ನನಗೆ ಚಿತ್ರಹಿಂಸೆ ನೀಡುತ್ತಿದ್ದರು ಮತ್ತು ನನಗೆ ಮತ್ತು ನನ್ನ ಮಕ್ಕಳ ಜೀವನಾಂಶಕ್ಕೆ ಏನನ್ನು ನೀಡುತ್ತಿರಲಿಲ್ಲ. ಆದ್ದರಿಂದ ನಾನು ಮತ್ತು ನನ್ನ ಮಕ್ಕಳು ಈಗ ನನ್ನ ತವರು ಮನೆಯಲ್ಲಿ ಇರುತ್ತೇವೆ.

ನಾನು ಮತ್ತು ನನ್ನ ಮಕ್ಕಳು ತವರು ಮನೆಗೆ ಬಂದ ನಂತರ ಎದುರುದಾರ 2 ಬಾರಿ ಬಂದಾಗ ಊರಿನಲ್ಲಿ ಪಂಚಾಯಿತಿ ನಡೆಸಿ ಎದುರುದಾರನಿಗೆ ಬುದ್ಧಿ ವಾದ ಹೇಳಿ ನಮ್ಮನ್ನು ಅವರೊಂದಿಗೆ ಕಳಹಿಸಿಕೊಟ್ಟಿರುತ್ತಾರೆ. ಎದುರುದಾರನ ಮನೆಗೆ ಹೋದ 2-3 ತಿಂಗಳಿನಲ್ಲಿ ಪುನಃ ನಮಗೆ ಹಿಂಸೆ ನೀಡಿದ್ದರಿಂದ್ದಾಗಿ ನಾವು ನಮ್ಮ ತವರು ಮನೆಗೆ ಮರಳಿ ಬಂದಿರುತ್ತೇವೆ.

2 ನೇ ಅರ್ಜಿದಾರ ಐಟಿಐ ಮುಗಿಸಿ ಮನೆಯಲ್ಲಿ ಇದ್ದಾನೆ, 2 ನೇ ಅರ್ಜಿದಾರಳು ಮುಂದಿನ ಶೈಕ್ಷಣಿಕ ವರ್ಷದಲ್ಲಿ ದ್ವಿತೀಯ ಪಿ.ಯು. ಹೋಗಬೇಕು. ನಮ್ಮಗಳ ಜೀವನ ನಿರ್ವಹಣೆಗೆ ಯಾವುದೇ ಆದಾಯದ ಮೂಲವಿರುವುದಿಲ್ಲ.

ಎದುರುದಾರ ಬಾರ್ ಬೆಂಡಿಂಗ್ ಕೆಲಸ ಮಾಡುತ್ತಾರೆ. ನನ್ನ ಗಂಡ ಪ್ರತಿನಿತ್ಯ 2,000/- ರೂ ದುಡಿಯುತ್ತಾರೆ. ಬಾರ್ ಬೆಂಡಿಂಗ್ ಕೆಲಸ ಇರದೇ ಇದ್ದಾಗ ನನ್ನ ಗಂಡ ನ್ಯಾಯಬೆಲೆ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ. ಎದುರುದಾರ ನಮ್ಮಗಳ ಜೀವನ ನಿರ್ವಹಣೆಗೆ ಮತ್ತು ಮಕ್ಕಳ ಶಿಕ್ಷಣಕ್ಕೆ ಯಾವುದೇ ವ್ಯವಸ್ಥೆ ಮಾಡಿರುವುದಿಲ್ಲ. ಎದುರುದಾರನಿಗೆ ಒಂದು ಮನೆ ಮತ್ತು 26 ಗುಂಟೆ ಜಮೀನು ಇದೆ. ನಮ್ಮಗಳ ಜೀವನಾಂಶಕ್ಕೆ ಮತ್ತು ಮಕ್ಕಳ ಶೈಕ್ಷಣಿಕ ಖರ್ಚಗಳಿಗಾಗಿ ಮಾಸಿಕ 20,000/- ರೂಗಳ ಅಗತ್ಯವಿದ್ದು ಅಷ್ಟನ್ನು ನೀಡುವಷ್ಟು ಎದುರುದಾರ ಶಕ್ತರಿರುತ್ತಾರೆ.

( ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

sd/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**